ಮಾಡತಕ್ಕದ್ದರ ಜೊತೆಗೆ ನಿಮ್ಮಲ್ಲೇ ಇರುವ Social forest ನವರು 2 ರೂಪಾಯಿ 70 ಪೈಸೆ ಒಂದು ಗಿಡಕ್ಕೆ ಚಾರ್ಜ್ ಮಾಡುತ್ತಾರೆ. 2 ರೂಪಾಯಿ 70 ಪೈಸೆಗೆ ಇವರು ಮಾಡುವಂಥ ಗಿಡವನ್ನು 70 ಪೈಸೆಗೆ ನಮ್ಮ ಹುಡುಗರು ಮಾಡಿಕೊಡುತ್ತಾರೆ. Social forest ನವರು ಒಂದು ಗಿಡಕ್ಕೆ ನಮ್ಮ ಹುಡುಗರಿಗೆ 60 ಅಥವಾ 70 ಪೈಸೆ ಕೊಡುತ್ತಾರೆ. ಉಳಿದ 2 ರೂಪಾಯಿಯ ಗಂಟನ್ನು ಇವರೇ ಹೊಡೆಯುತ್ತಾರೆ. ಏನು ಸಿಗುತ್ತದೆ ಅದರಲ್ಲಿ ಗ್ರಾಮ ಪಂಚಾಯಿತಿಯ ಮುಂದೆ ಅಪ್ಪಣ್ಣೆ ಗಿಡ ಕೊಡುತ್ತಾರೆ. ಎಂತೋದೋ ಗಿಡ ತೇಗದ ಗಿಡಗಳಂಥ ಉಪಯೋಗಕ್ಕೆ ಬರುವ ಗಿಡಗಳನ್ನು ಇವರು ಕೊಡುವುದಿಲ್ಲ, ಗ್ರಾಮ ಪಂಚಾಯಿತಿಗೆ ತೆಗೆದುಕೊಂಡು ಹೋಗಿ dump ಮಾಡಿ ಬರುತ್ತಾರೆ. ಆ ಗಿಡಗಳನ್ನು ನೆಟ್ಟರೆ ರೂ.15 ಸಿಗುತ್ತದೆ ಎಂದು ಹೇಳಿ ಯಾರ್ಯಾರು ಹೊತ್ತುಕೊಂಡು ಹೋಗುತ್ತಾರೋ? ನನಗೆ 20 ಗಿಡ ಬರಿ ನನಗೊಂದು 30 ಗಿಡ ಬರಿ ಕೊಡಿ ಎಂದು ಹೇಳುತ್ತಾರೆ. ಒಂದು ಗಿಡವನ್ನು ನೆಟ್ಟಿಲ್ಲ. ಇವತ್ತು ಆತ್ಮಸಾಕ್ಷಿಯಾಗಿ ಹೇಳುತ್ತೇನೆ, ಇದನ್ನು ಮೊದಲು ತೆಗೆದುಹಾಕಿ ಇದರಿಂದ ಒಂದೇ ಒಂದು ಗಿಡ ಇವತ್ತು ಅಭಿವೃದ್ಧಿಯಾಗಿಲ್ಲ. ಏಕೆಂದರೆ, ಇವತ್ತು ಕುಡಿಯುವುದಕ್ಕೆ ನೀರಿಲ್ಲ. ಇನ್ಯಾವುದಕ್ಕೆ ಗಿಡ ತೆಗೆದುಕೊಂಡು ಹೋಗಿ ನೆಡುತ್ತಾರೆ?

ಉಪಾಧ್ಯಕ್ಷರು: ನಮ್ಮ Assembly proceedings ನ್ನು ವೀಕ್ಷಣೆ ಮಾಡುವುದಕ್ಕೆ chinese Delegates ಬಂದಿದ್ದಾರೆ. On behalf of Hon'ble members of karnataka Legislative Assembly I welcome Mr.Sun shoungang, member of standing committee and minister of publicity Department of CPC shandong province and other members of the delegation who are witnessing the Assembly proceedings from the speaker's Gallery.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಚೈನೀಸ್ ಭಾಷೆ ನನಗೆ ಬರುವುದಿಲ್ಲ.

ಉಪಾಧ್ಯಕ್ಷರು: ನಿಮ್ಮ ಭಾಷಣ ವೀಕ್ಷಣೆ ಮಾಡುವುದಕ್ಕೆ ಬಂದಿದ್ದಾರೆ ಮಾತನಾಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಈ Social forest ಗೆ ದಯವಿಟ್ಟು ದುಡ್ಡು ಕೊಡುವುದನ್ನು ನಿಲ್ಲಿಸಿ. ಅಲ್ಲಿ ಮೋಸವಾಗುತ್ತಿದೆ, ನಾನು ನೇರವಾಗಿ ಹೇಳುತ್ತಿದ್ದೇನೆ. ಆ ಗಿಡಗಳನ್ನು 70 ಪೈಸೆಗೆ ತೆಗೆದುಕೊಳ್ಳುತ್ತಾರೆ, ನಮ್ಮವರೇ ಫಾರಂನಲ್ಲಿ ಮಾಡಿಕೊಡುತ್ತಾರೆ. ಅವನ್ನು 2 ರೂಪಾಯಿಗೆ ಒಂದರಂತೆ